# ಭಾರತೀಯ ಜನತಾ ಪಾರ್ಟಿ

(ಕೇಂದ್ರ ಕಚೇರಿ)

11, ಅಶೋಕ ರಸ್ತೆ, ನವದೆಹಲಿ–110001

ಖಜಟ. ಓಂ. : 23005700; ಈಚಿಥ : 23005787

ದಿನಾಂಕ: ಜನವರಿ 08, 2014

## ಭಾಜಪ ರಾಷ್ಟ್ರೀಯ ವಕ್ತಾರೆ ಶ್ರೀಮತಿ ನಿರ್ಮಲ ಸೀತಾರಾಮನ್ ಪತ್ರಿಕಾ ಪ್ರಕಟಣೆ

ಬಾಂಗ್ಲಾದೇಶದಲ್ಲಿ ಹಿಂದು ಅಲ್ಪಸಂಖ್ಯಾತ ಸಮೂಹಗಳ ಮೇಲೆ ನಡೆದ ಗಲಭೆಯನ್ನು ಭಾಜಪ ಗಂಭೀರವಾಗಿ ಪರಿಗಣಿಸುತ್ತದೆ.

ದೇಶೀಯ ಭದ್ರತಾ ವಿಚಾರಗಳು, ಆ ದೇಶದ ಆಂತರಿಕರಿ ವಿಷಯಗಳಾಗಿದೆ ಎಂದು ನಾವು ಪರಿಗಣಿಸುತ್ತೇವೆ, ಆದರೆ ವ್ಯಾಪಕವಾಗಿ ವರದಿಯಾದ ಚುನಾವಣಾ ನಂತರದ ಗಲಭೆಗಳು ಕೇವಲ ಆಂತರಿಕ ವಿಚಾರವಾಗಿ ಉಳಿದಿಲ್ಲ. "ವ್ಯವಸ್ಥಿತ ದಾಳಿ ನಡೆಸಲಾಯಿತು... ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಗ್ರಾಮಗಳಲ್ಲಿ, ಅಂದರೆ ಠಾಕುರ್‌ಗಾಂನ ಉತ್ತರ ಜಿಲ್ಲೆಗಳು, ಚಿಟಗಾಂಗ್‌ನ ದಕ್ಷಿಣ ಜಿಲ್ಲೆ ಹಾಗೂ ಪಶ್ಚಿಮ ಜೆಸೋರ್‌ನಲ್ಲಿ ದಾಳಿ ಸಂಭವಿಸಿದವು." ನಾಲ್ಕು ಜಿಲ್ಲೆಗಳಲ್ಲಿ ಹಿಂದು ಸಮುದಾಯದವರ ವಿರುದ್ಧ ಜರುಗಿದ ಹೇಯ ಕೃತ್ಯವನ್ನು ಬಾಂಗ್ಲಾದೇಶದ ಮಾಧ್ಯಮಗಳು ವಿವರಿಸಿವೆ. ಚುನಾವಣೆಯ ನಂತರ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ನೂರಾರು ಮನೆಗಳಿಗೆ ಬೆಂಕಿ ಹಚ್ಚಲಾಯಿತು ಮತ್ತು ದರೋಡೆ ಮಾಡಲಾಯಿತು.

ಇದೇ ರೀತಿ ಪಾಕಿಸ್ತಾನ ಹಿಂದು ಪರಿಷತ್‌ಕೂಡ ಹಿಂದು ಬಾಲಕೀಯರ ಮೇಲೆ ಆಗುತ್ತಿರುವ ನಿರಂತರ ಕಿರುಕುಳ ಮತ್ತು ಅತ್ಯಾಚಾರದ ಪ್ರಕರಣಗಳು ಹಾಗೂ ಬಲವಂತದ ಮತಾಂತರ ನಡೆಯುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿವೆ. ಹಿಂದು ಬಾಲಕಿಯರನ್ನು ಬಲವಂತವಾಗಿ ಮತಾಂತರ ಮಾಡಲಾಗುತ್ತಿದೆ, ಹಿಂದು ದೇವಸ್ಥಾನಗಳ ಮೇಲೆ ದಾಳಿಯಂತಹ ಅಪರಾಧಗಳನ್ನು ಜರುಗಿಸಲಾಗುತ್ತಿದೆ, ಪಕ್ಷಪಾತ ಧೋರಣೆಯಿಂದಲೂ 2012ರಲ್ಲಿ ಸುಮಾರು 3000 ಹಿಂದುಗಳು ಭಾರತಕ್ಕೆ ವಲಸೆ ಹೋಗಿದ್ದು ಕಳೆದ ವರ್ಷಕ್ಕಿಂತ ಇದು ಮೂರು ಪಟ್ಟು ಹೆಚ್ಚಿನ ಸಂಖ್ಯೆಯಾಗಿದೆ ಎಂದು ಪಾಕಿಸ್ತಾನದ ಡಾನ್ ಡಾಟ್ ಕಾಂ ಅಂತರ್ಜಾಲ ತಾಣ ತಿಳಿಸಿದೆ. ಮಾನವೀಯತೆ ವ್ಯವಹಾರಗಳ ಸಮನ್ವಯಕ್ಕೆ ಮುಡುಪಾದ ವಿಶ್ವ ಸಂಸ್ಥೆ ಕಚೇರಿ ಪಾಕಿಸ್ತಾನದಲ್ಲಿ ನಡೆಸುತ್ತಿರುವ ಐಆರ್‌ಐಎನ್ ಸುದ್ದಿ ಸಂಸ್ಥೆ ನೀಡಿರುವ ವರದಿ ಪ್ರಕಾರ ಹಿಂದು ಬಾಲಕೀಯರ ಬಲಾತ್ಕಾರ ನಡೆಸಿ ಅವರನ್ನು ಬಲವಂತವಾಗಿ ಮತಾಂತರ ಮಾಡಲಾಗುತ್ತಿದೆ. ಕರಾಚಿ ಒಂದರಲ್ಲೇ ಪ್ರತಿ ತಿಂಗಳು 15 ರಿಂದ 20 ಪ್ರಕರಣಗಳು ದಾಖಲಾಗುತ್ತಿದ್ದು, ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ ಎಂದು ಭಾರತೀಯ ಮಾಧ್ಯಮಗಳೂ ಸಹ ವರದಿ ಮಾಡಿವೆ. ಏಶ್ಯ ಮಾನವ ಹಕ್ಕುಗಳ ಆಯೋಗವು(ಎಎಚ್‌ಆರ್‌ಸಿ) ಇದೇ ರೀತಿ ವರದಿ ಮಾಡಿದೆ. ಬಾಂಗ್ಲಾದೇಶ ಅಥವಾ ಪಾಕಿಸ್ತಾನವಾಗಲಿ, ನಮ್ಮ ನೆರೆ ರಾಷ್ಟ್ರಗಳಲ್ಲಿ ಉದ್ಭವಿಸಿರುವ ಅಸ್ಥಿರತೆಯಿಂದಾಗಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ನಾಗರಿಕರು, ವಿಶೇಷವಾಗಿ ಹಿಂದುಗಳು ದಾಳಿ–ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುತ್ತ, ರಾಜತಾಂತ್ರಿಕ ವ್ಯಪ್ತಿಯಲ್ಲಿ ಈ ವಿಚಾರದ ಕುರಿತು ಒತ್ತಡತರಬೇಕಿದೆ.

(ಇಆರ್.ಅರುಣ್ ಕುಮಾರ್ ಜೈನ್)
ಕಚೇರಿ ಕಾರ್ಯದರ್ಶಿ